# ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್.ಸಿ ನ್ಯಾಯಾಲಯ, ಶ್ರೀರಂಗಪಟ್ಟಣ

ಸಿ.ಸಿ. 238/2013

| | | | | |
|---|---|---|---|---|
| ಸಾಕ್ಷಿಯ ಹೆಸರು | : ವೆಂಕಟಸ್ವಾಮಿ | ಪ್ರಾ ಸಾ | : | 01 |
| ತಂದೆ/ಗಂಡನ ಹೆಸರು | : ಲೇ.ವೆಂಕಟಪ್ಪ | ಚಾ ಸಾ | : | 02 |
| ವಯಸ್ಸು | : 60 ವರ್ಷ | | | |
| ವೃತ್ತಿ | : ವ್ಯವಸಾಯ | | | |
| ವಾಸಸ್ಥಳ | : ಗಂಜಾಂ | | | |

ಸಾಕ್ಷಿಗೆ ದಿನಾಂಕ: 27.07.2024 ರಂದು ಪ್ರಮಾಣ ವಚನ ನೀಡಲಾಯಿತು

## ಮುಖ್ಯ ವಿಚಾರಣೆ: ಸ.ಸ.ಅ ರವರಿಂದ

ಚಾ ಸಾ 3 ನನಗೆ ಗೊತ್ತಿಲ್ಲ. ಆರೋಪಿ 1 ಮತ್ತು 3 ರವರು ಗೊತ್ತಿಲ್ಲ.

ನನ್ನನ್ನು ಪೋಲಿಸರು ಯಾವುದೇ ಘಟನಾ ಸ್ಥಳಕ್ಕೆ ಕರೆದುಕೊಂಡು ಹೋಗಿಲ್ಲ, ನನ್ನ ಸಮಕ್ಷಮ ಮಹಜರ್ ಕ್ರಮ ಜರುಗಿಸಿ ಯಾವುದೇ ವಸ್ತುವನ್ನು ಮತ್ತು ಹಣವನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಈ ಪ್ರಕರಣದ ಬಗೆಗ ನನಗೆ ಏನು ಗೊತ್ತಿಲ್ಲ.

ಸಾಕ್ಷಿಗೆ ಸ್ಥಳ ಮಹಜರ್ ನ್ನು ತೋರಿಸಲಾಗಿ ಸಾಕ್ಷಿ ನೋಡಿ ಗುರುತಿಸಿದ್ದರಿಂದ ಮಹಜರನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1 ಎ ಎಂದು ಗುರುತಿಸಲಾಯಿತು. ನಿಪಿ 1 ರಲ್ಲಿ ಏನು ಬರೆದಿದೆ ನನಗೆ ತಿಳಿದಿಲ್ಲ.

(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಎ ಪಿ ಪಿ ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದರು , ನೀಡಲಾಯಿತು)

## ಪಾಟೀಸವಾಲು: ಸ.ಸ.ಅ ರವರಿಂದ

ದಿನಾಂಕ 27.10.2012 ರಂದು ಶ್ರೀರಂಗಪಟ್ಟಣ ಟೌನ್ ಮೈ-ಬೆಂಗಳೂರು ರಾಜ್ಯ ಹೆದ್ದಾರಿ ರಸ್ತೆ ಪಕ್ಕದಲ್ಲಿರುವ ಶಾರದಾ ಡಾಬಾ ದಲ್ಲಿ ಅನೈತಿಕ ಲೈಂಗಿಕ ಚಟುವಟಿಕೆ ನಡೆಯತ್ತಿದೆ ನಾವು ಸ್ಥಳಕ್ಕೆ ಹೋಗಿ ದಾಳಿ ಮಾಡಬೇಕು ಎಂದು ಚಾ ಸಾ 1 ರವರು

ನನ್ನನ್ನು ಹಾಗೂ ಚಾ ಸಾ 3 ರವರನ್ನು ಬರಮಾಡಿಕೊಂಡು ಪಂಚರನ್ನಾಗಿ ಸಹಕರಿಸಬೇಕೆಂದು ಕೇಳಿಕೊಂಡ ಮೇರೆಗೆ ನಾವುಗಳು ಒಪ್ಪಿಕೊಂಡ ಮೇರೆಗೆ ನಮಗೆ ಪ್ರಕರಣದ ವಿದ್ಯಾಮಾನಗಳನ್ನು ತಿಳಿಸಿದರು ಎಂದರೆ ಸರಿಯಲ್ಲ. ನಾನು ಚಾ ಸಾ 1 ಮತ್ತು 3 ಹಾಗೂ ಇತರೆ ಸಿಬ್ಬಂದಿಗಳ ಜೊತೆಗೆ ಘಟನಾ ಸ್ಥಳಕ್ಕೆ ಹೋದಾಗ ರೂಂ.106 ಮತ್ತು 110 ರಲ್ಲಿ ವೇಶ್ಯಾವಾಟಿಕೆಯಲ್ಲಿ ತೊಡಗಿದ್ದು ಆರೋಪಿ 1 ಮತ್ತು 2 ರವರನ್ನು ನಮ್ಮಗಳ ಸಮಕ್ಷಮ ವಶಕ್ಕೆ ಪಡೆದು ಅವರ ಬಳಿ ಇದ್ದ 2 ಕಪ್ಪು ಬಣ್ಣದ ನೋಕಿಯಾ ಮೊಬೈಲ್ ಹ್ಯಾಂಡ್ ಸೆಟ್ ಹಾಗೂ ನಗದು ಹಣ ರೂ.1210/- ಹಾಗೂ 2 ಬಳಸದೆ ಇರುವ ಕಾಂಡೋಮ್ ಗಳನ್ನು ಅಮಾನತ್ತುಪಡಿಸಿಕೊಂಡರು ಎಂದರೆ ಸರಿಯಲ್ಲ. ಸದರಿ ಘಟನಾ ಸ್ಥಳದಲ್ಲಿ ಆರೋಪಿತರನ್ನು ವಶಕ್ಕೆ ಮತ್ತು ಅವರ ವಶದಲ್ಲಿದ್ದ ಮೇಲ್ಕಂಡ ವಸ್ತುಗಳನ್ನು ಅಮಾನತ್ತುಪಡಿಸಿಕೊಳ್ಳುವ ಕಾಲದಲ್ಲಿ ನಾನು ಮತ್ತು ಚಾ ಸಾ 3 ರವರು ಖುದ್ದು ಹಾಜರಿದ್ದು ಸದರಿ ಮಹಜರ್ ಗೆ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಮಹಜರನ್ನು ಮ.2.30-3.30 ರವರೆಗೆ ನಮ್ಮಗಳ ಸಮಕ್ಷಮ ಬರೆಯಲಾಯಿತು ಎಂದರೆ ಸರಿಯಲ್ಲ. ನಾನು ಆ ದಿನಾಂಕದಂದು ಖುದ್ದು ಹಾಜರಿದ್ದು ನಿಪಿ 1 ರಲ್ಲಿರುವ ಎಲ್ಲಾ ಅಂಶಗಳನ್ನು ತಿಳಿದುಕೊಂಡು ಸಹಿ ಮಾಡಿದ್ದರೂ ಸಹಾ ಆರೋಪಿತರಿಗೆ ಅನುಕೂಲವಾಗಲೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಆರೋಪಿತರ ಪರ ವಕೀಲರು ಇಲ್ಲ ಎಂದು ನುಡಿದಿರುತ್ತಾರೆ.
ಮರುವಿಚಾರಣೆ ಇಲ್ಲ.
ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ. ಓ. ಹೇ. ಸ. ಒ.

ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ.